# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯಾಲಯ

## ಅಫಜಲಪೂರ.

**ಸಿ.ಸಿ. ನಂಃ 7/2015**

**ಅಫಜಲಪೂರ ಪೋಲಿಸ್ ಠಾಣೆ**

// ವಿರುದ್ಧ //

**ಸಂತೋಷ**

## ದೋಷಾರೋಪಣೆ

**ಸಿದ್ದು @ ಸಿದ್ಧರಾಮ ತಂದೆ ಮೈಲಪ್ಪ ಪಾಟೀಲ**
ವಯಸ್ಸುಃ24-ವರ್ಷ, ಉದ್ಯೋಗಃ ವ್ಯಾಪಾರ
ಸಾ|| ಅಫಜಲಪುರ, ಜಿ|| ಕಲಬುರಗಿ.
ಆರೋಪಿಯಾದ ನಿಮ್ಮ ಮೇಲೆ....

ನಾನು **ಪ್ರಶಾಂತ ಬಾದವಾಡಗಿ, ಬಿ.ಎ., ಎಲ್ಎಲ್ಬಿ (ಸ್ಪೇಷಲ್),** ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಅಫಜಲಪೂರ, ಆರೋಪಿಸುವುದೇನೆಂದರೆ,

ಮೊದಲನೇಯದಾಗಿ ಅಫಜಲಪುರ ಪಟ್ಟಣದ ಮಹಾಂತೇಶ್ವರ ವಿದ್ಯಾವರ್ಧಕ ಸಂಘದ ಡಿ.ಎಡ್ ಮತ್ತು ಬಿ.ಎಡ್ ಕಾಲೇಜಿನಲ್ಲಿ ದಿನಾಂಕಃ17.05.2010 ರಂದು ಅಫಜಲಪುರ ತಾಲೂಕಿನ ಗ್ರಾಮ ಪಂಚಾಯಿತಿ ಚುನಾವಣೆ ಮತ ಎಣಿಕೆ ನಡೆಯುತ್ತಿರುವ ಸಂದರ್ಭದಲ್ಲಿ ಬೆಳಿಗ್ಗೆ 8.30 ಗಂಟೆಯ ಸಮಯದಲ್ಲಿ ಆರೋಪಿಯಾದ ನೀನು ಉಳಿದ ಆರೋಪಿತರೊಂದಿಗೆ ಸದರಿ ಕಾಲೇಜಿನ ಮುಖ್ಯ ದ್ವಾರದ ಬಳಿ ಅಪರಾಧ ಮಾಡುವ ಉದ್ದೇಶವನ್ನು ಹೊಂದಿ ಅಕ್ರಮ ಕೂಟ ರಚಿಸಿಕೊಂಡು ಚಾಸಾ-1 ಮತ್ತು ಚಾಸಾ-4 ರಿಂದ 15ರವರಿಗೆ 'ಏ ಬೋಸಡಿ ಮಕ್ಕಳೇ ಒಳಗಡೆ ಬಿಡುತ್ತಿರಿಲ್ಲಾ' ಎಂದು ಚಿರಾಡುತ್ತಾ ಅವಾಚ್ಯ ಶಬ್ದಗಳಿಂದ ಬೈದು ಆ

ಮೂಲಕ **ಭಾರತ ದಂಡ ಸಂಹಿತೆ ಕಲಂಃ504 ಸಹವಾಚಕ 149** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಎರಡನೇಯದಾಗಿ ಮೇಲೆ ವಿವರಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆದೇ ವಿಚಾರವಾಗಿ ಆರೋಪಿಯಾದ ನೀನು ಉಳಿದ ಆರೋಪಿತರೊಂದಿಗೆ ಸೇರಿ ಅಕ್ರಮ ಕೂಟ ರಚಿಸಿಕೊಂಡು ಅಫಜಲಪುರ ಪಟ್ಟಣದ ಮಹಾಂತೇಶ್ವರ ವಿದ್ಯಾವರ್ಧಕ ಸಂಘದ ಡಿ.ಎಡ್ ಮತ್ತು ಬಿ.ಎಡ್ ಕಾಲೇಜಿನ ಮುಖ್ಯ ದ್ವಾರವನ್ನು ಜೋರಾಗಿ ತೆಗೆಯಲು ಪ್ರಯತ್ನಿಸಿದಾಗ ಅದನ್ನು ತಡೆಯಲು ಬಂದ ಚಾಸಾ-1 ಮತ್ತು ಚಾಸಾ-4 ರಿಂದ 15ರವರ ಮೇಲೆ ಕಲ್ಲು ತೂರಾಟ ನಡೆಸಿದ್ದು ಆಗ ಸದರಿ ಕಲ್ಲು ಚಾಸಾ-1ರವರ ತಲೆಗೆ ತಾಗಿ ಆತನಿಗೆ ಸಾದಾ ಸ್ವರೂಪದ ರಕ್ತಗಾಯ ಉಂಟುಪಡಿಸಿ ಆ ಮೂಲಕ **ಭಾರತ ದಂಡ ಸಂಹಿತೆ ಕಲಂಃ324 ಸಹವಾಚಕ 149** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಮೂರನೇಯದಾಗಿ ಮೇಲೆ ವಿವರಿಸಿದ ದಿನಾಂಕ, ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಯಾದ ನೀನು ಉಳಿದ ಆರೋಪಿತರೊಂದಿಗೆ ಸೇರಿ ಚಾಸಾ-1 ಮತ್ತು 4 ರಿಂದ 15 ರವರಿಗೆ ಕರ್ತವ್ಯವನ್ನು ನಿರ್ವಹಿಸುವುದನ್ನು ತಪ್ಪಿಸುವ ಅಥವಾ ಅದನ್ನು ಮಾಡದಂತೆ ಬೆದರಿಸುವ ಉದ್ದೇಶದಿಂದ ಕಲ್ಲು ತೂರಾಟ ನಡೆಸಿ ಚಾಸಾ-1ರವರಿಗೆ ಸಾದಾ ಸ್ವರೂಪದ ಗಾಯ ಉಂಟಾಗುವಂತೆ ಮಾಡುವ ಮೂಲಕ ಚಾಸಾ-1 ಮತ್ತು 4 ರಿಂದ 15 ರವರ ಕರ್ತವ್ಯಕ್ಕೆ ಅಡ್ಡಿಪಡಿಸಿ ಆ ಮೂಲಕ **ಭಾರತ ದಂಡ ಸಂಹಿತೆ ಕಲಂಃ 332 ಸಹವಾಚಕ 149** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ನಾಲ್ಕನೇಯದಾಗಿ ಮೇಲೆ ವಿವರಿಸಿದ ದಿನಾಂಕ, ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಯಾದ ನೀನು ಉಳಿದ ಆರೋಪಿತರೊಂದಿಗೆ ಸೇರಿ ಚಾಸಾ-1 ಮತ್ತು 4 ರಿಂದ 15 ರವರಿಗೆ ಕರ್ತವ್ಯವನ್ನು ನಿರ್ವಹಿಸುವುದನ್ನು ತಪ್ಪಿಸುವ ಅಥವಾ ಅದನ್ನು ಮಾಡದಂತೆ ಬೆದರಿಸುವ ಉದ್ದೇಶದಿಂದ ಕಲ್ಲು ತೂರಾಟ ನಡೆಸಿ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿ ಆ ಮೂಲಕ **ಭಾರತ ದಂಡ ಸಂಹಿತೆ ಕಲಂಃ 353 ಸಹವಾಚಕ 149** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಐದನೇಯದಾಗಿ ಮೇಲೆ ವಿವರಿಸಿದ ದಿನಾಂಕ, ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಯಾದ ನೀನು ಉಳಿದ ಆರೋಪಿತರೊಂದಿಗೆ ಸೇರಿ ಅಕ್ರಮಕೂಟವನ್ನು ರಚಿಸಿಕೊಂಡು ಚಾಸಾ-1 ಮತ್ತು 4 ರಿಂದ 15 ರವರನ್ನು ಕರ್ತವ್ಯ ನಿರ್ವಹಿಸದಂತೆ ಅಕ್ರಮವಾಗಿ ತಡೆದು ನಿಲ್ಲಿಸಿದ ಕಾರಣ **ಭಾರತ ದಂಡ ಸಂಹಿತೆ ಕಲಂಃ 341 ಸಹವಾಚಕ 149** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಆರನೇಯದಾಗಿ ಮೇಲೆ ವಿವರಿಸಿದ ದಿನಾಂಕ, ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಯಾದ ನೀನು ಉಳಿದ ಆರೋಪಿತರೊಂದಿಗೆ ಸೇರಿ ಅಕ್ರಮ ಕೂಟವನ್ನು ರಚಿಸಿಕೊಂಡು ಚಾಸಾ-1 ಮತ್ತು 4 ರಿಂದ 15 ರವರ ಮೇಲೆ ಕಲ್ಲು ತೂರಾಟ ನಡೆಸಿ ದೊಂಬಿ ಉಂಟುಮಾಡಿದ್ದಕ್ಕಾಗಿ **ಭಾರತ ದಂಡ ಸಂಹಿತೆ ಕಲಂಃ 148 ಸಹವಾಚಕ 149** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಕೊನೆಯದಾಗಿ ಮೇಲೆ ವಿವರಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀನು ಉಳಿದ ಆರೋಪಿತರೊಂದಿಗೆ ಸೇರಿ ಮೇಲೆ ವಿವರಿಸಿದ ಅಪರಾಧಗಳನ್ನು ಎಸಗುವ ಸಂದರ್ಭದಲ್ಲಿ ವಿಧಿವಿರುದ್ದ ಕೂಟದ ಸದಸ್ಯರಾಗಿರುವುದರಿಂದ

**ಭಾರತ ದಂಡ ಸಂಹಿತೆ ಕಲಂ 143 ಸಹವಾಚಕ 149** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ದಿನಾಂಕಃ 24.11.2017 ಜೆಎಮ್ಎಫ್‌ಸಿ, ಅಫಜಲಪೂರ

**<u>ಆರೋಪಿಯ ಹೇಳಿಕೆ</u>**

ಪ್ರ-1 ನಿಮಗೆ ಮೇಲೆ ಓದಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೆ?
ಉಃ

ಪ್ರ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆ ಬಯಸುತ್ತಿಯೋ?
ಉಃ

ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಹೇಳಿದ ಆರೋಪಣೆಗಳನ್ನು ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರುಗಳು ನೀಡಿದ ಉತ್ತರವನ್ನು ಯತಾಸ್ಥಿತಿಯಲ್ಲಿ ಬರೆದುಕೊಂಡಿದ್ದು ನಿಜವಿರುತ್ತದೆ

ದಿನಾಂಕಃ 24.11.2017 ಜೆಎಮ್ಎಫ್‌ಸಿ, ಅಫಜಲಪೂರ